INSTAKAS

# ಬ್ರಿಕ್ಸ್ (BRICS) ಇಂದೋರ್ ಘೋಷಣೆ



## ಇದೀಗ ಸುದ್ದಿಯಲ್ಲಿ:

ಬ್ರಿಕ್ಸ್ ಕೃಷಿ ಮಂತ್ರಿಗಳು ಮತ್ತು ಅಧಿಕಾರಿಗಳ ಮಟ್ಟದ ಸಭೆಗಳನ್ನು ಇಂದೋರ್‌ನಲ್ಲಿ ನಡೆಸಲಾಯಿತು, ಇದರಲ್ಲಿ **'ಬ್ರಿಕ್ಸ್ ಇಂದೋರ್ ಘೋಷಣೆ'**ಯನ್ನು (BRICS Indore Declaration) ಸರ್ವಾನುಮತದಿಂದ ಅಳವಡಿಸಿಕೊಳ್ಳಲಾಯಿತು.

## ಬ್ರಿಕ್ಸ್ ಇಂದೋರ್ ಘೋಷಣೆ - ಪ್ರಮುಖವಾಗಿ ಗಮನಹರಿಸಿದ ಕ್ಷೇತ್ರಗಳು

- **ಸಣ್ಣ ರೈತರಿಗೆ ಸಹಾಯ ಮಾಡುವುದು:** ಸಣ್ಣ ರೈತರು, ಮಹಿಳೆಯರು ಮತ್ತು ಯುವಕರಿಗೆ ಸಹಾಯ ಮಾಡುವತ್ತ ಗಮನಹರಿಸುತ್ತದೆ.
- **ಆಹಾರ ಭದ್ರತೆ:** ಜಗತ್ತಿಗೆ ಆಹಾರವನ್ನು ಒದಗಿಸಲು ಒಟ್ಟಾಗಿ ಕೆಲಸ ಮಾಡುವುದು.
- **ಹೊಸ ತಂತ್ರಜ್ಞಾನ:** ಕೃಷಿಯಲ್ಲಿ ಎಐ (AI) ಮತ್ತು ಡಿಜಿಟಲ್ ನಕ್ಷೆಗಳಂತಹ ಸ್ಮಾರ್ಟ್ ಸಾಧನಗಳನ್ನು ಬಳಸುವುದು.
- **ಸುರಕ್ಷಿತ ಕೃಷಿ:** ಸಾವಯವ ಮತ್ತು ನೈಸರ್ಗಿಕ ಕೃಷಿಯೊಂದಿಗೆ ಪ್ರಕೃತಿಯನ್ನು ರಕ್ಷಿಸುವುದು.



## ಬ್ರಿಕ್ಸ್ (BRICS) ಬಗ್ಗೆ

- **ಸ್ಥಾಪನೆ** - 2009
- **ಕೇಂದ್ರ ಕಛೇರಿ** - ಶಾಂಘೈ

- ಇದು ವಿಶ್ವದ ಪ್ರಮುಖ ಉದಯೋನ್ಮುಖ ಆರ್ಥಿಕತೆಗಳನ್ನು ಹೊಂದಿರುವ ರಾಷ್ಟ್ರಗಳ ಗುಂಪಿನ ಸಂಕ್ಷಿಪ್ತ ರೂಪವಾಗಿದೆ, ಅವುಗಳೆಂದರೆ **ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ** (2010 ರಲ್ಲಿ ಸೇರ್ಪಡೆಗೊಂಡಿತು).
- ಮೂಲ: ಬ್ರೆಜಿಲ್, ರಷ್ಯಾ, ಭಾರತ ಮತ್ತು ಚೀನಾದ ನಾಲ್ಕು ಉದಯೋನ್ಮುಖ ಆರ್ಥಿಕತೆಗಳನ್ನು ವಿವರಿಸಲು **2001 ರಲ್ಲಿ ಬ್ರಿಟಿಷ್ ಅರ್ಥಶಾಸ್ತ್ರಜ್ಞ ಜಿಮ್ ಒ'ನೀಲ್** (Jim O'Neill) ಅವರು **"BRIC"** ಎಂಬ ಪದವನ್ನು ಸೃಷ್ಟಿಸಿದರು.
- **ಇತ್ತೀಚಿನ ವಿಸ್ತರಣೆ (BRICS+):** 2024-2025 ರಲ್ಲಿ, ಈ ಒಕ್ಕೂಟವು **ಈಜಿಪ್ಟ್, ಇಥಿಯೋಪಿಯಾ, ಇರಾನ್, UAE ಮತ್ತು ಇಂಡೋನೇಷ್ಯಾ**ವನ್ನು ಒಳಗೊಳ್ಳಲು ವಿಸ್ತರಿಸಿತು. ಸೌದಿ ಅರೇಬಿಯಾ ಆಹ್ವಾನವನ್ನು ಸ್ವೀಕರಿಸಿದೆ ಆದರೆ ಇನ್ನೂ ತನ್ನ ಸದಸ್ಯತ್ವವನ್ನು ಔಪಚಾರಿಕಗೊಳಿಸಿಲ್ಲ.
- **ಬ್ರಿಕ್ಸ್‌ನ ಪಾಲು:** ಬ್ರಿಕ್ಸ್ ಐದು ಅತಿದೊಡ್ಡ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಒಟ್ಟುಗೂಡಿಸುತ್ತದೆ, ಇದು **ಜಾಗತಿಕ ಜನಸಂಖ್ಯೆಯ 41%, ಜಾಗತಿಕ GDPಯ 24% ಮತ್ತು ಜಾಗತಿಕ ವ್ಯಾಪಾರದ 16%** ಅನ್ನು ಪ್ರತಿನಿಧಿಸುತ್ತದೆ (2028 ರ ವೇಳೆಗೆ, ಬ್ರಿಕ್ಸ್ ಜಾಗತಿಕ ಆರ್ಥಿಕತೆಯ 35 ಪ್ರತಿಶತವನ್ನು ಮಾಡುವ ನಿರೀಕ್ಷೆಯಿದೆ).
- **ಅಧ್ಯಕ್ಷತೆ:** ವೇದಿಕೆಯ ಅಧ್ಯಕ್ಷತೆಯನ್ನು ಸದಸ್ಯರ ನಡುವೆ ವಾರ್ಷಿಕವಾಗಿ ಹಂಚಿಕೆಯಾಗುತ್ತದೆ.

## ಪ್ರಮುಖ ಉಪಕ್ರಮಗಳು:

- **ಡಿಜಿಟಲ್ ಕೃಷಿ ಜಾಲ:** ರೈತರ ಕೃಷಿಭೂಮಿಗಳಿಗೆ ಡಿಜಿಟಲ್ ಪರಿಕರಗಳನ್ನು ಪರಿಚಯಿಸುವ ಉದ್ದೇಶದಿಂದ **IIT ದೆಹಲಿ** ನೇತೃತ್ವದಲ್ಲಿ ಈ ಉಪಕ್ರಮವನ್ನು ಆರಂಭಿಸಲಾಗಿದೆ.
- **ನೈಸರ್ಗಿಕ ಕೃಷಿ ಕೇಂದ್ರಗಳು:** ಸುರಕ್ಷಿತ ಕೃಷಿ ವಿಧಾನಗಳನ್ನು ಅಧ್ಯಯನ ಮಾಡುವ ಹಾಗೂ ಅಭಿವೃದ್ಧಿಪಡಿಸುವ ಉದ್ದೇಶದಿಂದ **ICAR-IIFSR** ನೇತೃತ್ವದಲ್ಲಿ ನೈಸರ್ಗಿಕ ಕೃಷಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
- **ರೈತರ ಬೀಜ ಹಕ್ಕುಗಳು:** ಸಾಂಪ್ರದಾಯಿಕ ದೇಶಿ ಬೀಜಗಳನ್ನು ಉಳಿಸಲು ಮತ್ತು ರೈತರ ಹಕ್ಕುಗಳನ್ನು ರಕ್ಷಿಸಲು ಇದೊಂದು ವಿಶೇಷ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

## ಬ್ರಿಕ್ಸ್ ಉಪಕ್ರಮಗಳು:

- **ಹೊಸ ಅಭಿವೃದ್ಧಿ ಬ್ಯಾಂಕ್** (NDB - New Development Bank)
- **ತುರ್ತು ಮೀಸಲು ವ್ಯವಸ್ಥೆ** (CRA - Contingent Reserve Arrangement)
- **ಬ್ರಿಕ್ಸ್ ಪಾವತಿ ವ್ಯವಸ್ಥೆ** (BRICS Payment System)
- **ಕಸ್ಟಮ್ಸ್ ಒಪ್ಪಂದಗಳು** (Customs Agreements)
- **ದೂರಸಂವೇದಿ ಉಪಗ್ರಹಗಳ ಸಮೂಹ** (Constellation of Remote Sensing Satellites)




## ಹೊಸ ಉಪಕ್ರಮ:

ಬ್ರಿಕ್ಸ್ ಸಂಘಟನೆಯು ತನ್ನದೇ ಆದ "ಹೊಸ ಕರೆನ್ಸಿ" ವ್ಯವಸ್ಥೆಯನ್ನು ಪ್ರಾರಂಭಿಸಲು ಯೋಜಿಸುತ್ತಿದೆ. ಇದು ಅಂತರರಾಷ್ಟ್ರೀಯ ವ್ಯಾಪಾರದಲ್ಲಿ US ಡಾಲರ್ ಮೇಲಿನ ಅವಲಂಬನೆಯನ್ನು ತಗ್ಗಿಸುವ **'ಡಾಲರ್ ಪ್ರಭಾವ ಕಡಿತ/ಡಾಲರ್ ಅಪಮೌಲ್ಯೀಕರಣ' (De-dollarization)** ಪ್ರಕ್ರಿಯೆಯತ್ತ ಇಟ್ಟಿರುವ ಒಂದು ಪ್ರಮುಖ ಹೆಜ್ಜೆಯಾಗಿದೆ.

